ಇಷ್ಟೊಂದು ಪ್ರೇಮವಿರುವ ಸಾಥಿಯಾನಿಗೆ ಕಾಶೀರಾಮ ಅವರು ನಂಬುಗೆಯ ವ್ಯಕ್ತಿಯಲ್ಲವೆಂದೇಕೆ ಅನ್ನುತ್ತಾರೆಂಬುದನ್ನು ನಾನು ಯೋಚಿಸುತ್ತಿದ್ದೆ.

★★★

ಐವತ್ತರ ಎಡಬಲದ ಮನೋಹರ ಅವರು ತೆಳ್ಳಗಿನ ಬಡಕಲು ಶರೀರದವರು. ಬೋಳುತಲೆ, ಕಿವಿಯ ಬದಿ ಮತ್ತು ಹಿಂದುಗಡೆ ಸ್ವಲ್ಪ ಕೂದಲುಗಳಿದ್ದವು. ಅವೂ ಸಂಪೂರ್ಣ ಬೆಳ್ಳಗಾಗಿದ್ದವು. ಬಂಗಾರ ಬಣ್ಣದ ಕಟ್ಟಿನ ಕನ್ನಡಕ ಮೂಗಿನ ಮೇಲಿತ್ತು. ಪೈಜಮಾ ಮತ್ತು ಬನಿಯನ್ನು ತೊಟ್ಟಿದ್ದರು. ಮುಖದಲ್ಲಿ ಮುಗುಳ್ನಗು ಇತ್ತು.

ಮನೋಹರ ಅವರು ಮುಕ್ತ ಮನಸ್ಸಿನಿಂದ ಮಾತಾಡುತ್ತಿದ್ದರು. ಅವರ ಸ್ವಭಾವ ನನಗೆ ಹಿಡಿಸಿತು. ನನ್ನ ನೆರೆಮನೆಯ ಕಾಶೀರಾಮರಂತೆ ಅಲ್ಲವೆಂದು ಸಮಾಧಾನಪಟ್ಟೆ.

"ಮನೋಹರ ಅವರೇ, ಈ ಸಾಥಿಯಾ ಮನುಷ್ಯ ಎಂಥವ?" ಕೇಳದೆ.

"ಬಹಳ ಒಳ್ಳೆಯ ಮನುಷ್ಯ. ಆತ ಸದಾ ಇನ್ನೊಬ್ಬರಿಗೆ ಸಹಾಯ ಮಾಡುತ್ತಿರುತ್ತಾನೆ. ಇತರರಿಂದ ಅವನು ಏನನ್ನೂ ಅಪೇಕ್ಷಿಸುವುದಿಲ್ಲ. ಖುಷಿಯಿಂದ ಅವರೇ ಏನಾದರೂ ಕೊಟ್ಟರೆ ಸಂತೋಷದಿಂದ ಸ್ವೀಕರಿಸುತ್ತಾನೆ."

"ಆತ ಕೋಳಿಗೇರಿಯ ಮದ್ಯದ ಅಂಗಡಿಯಲ್ಲಿ ದುಡಿಯುತ್ತಾನೆಂದು ನನಗೆ ಯಾರೊ ಹೇಳಿದರು. ಅಲ್ಲದೆ ಮಟಕಾ ಬುಕಿಂಗ್ ಕೂಡಾ ಮಾಡಿಕೊಳ್ಳುತ್ತಾನಂತೆ."

"ನಿಮಗೆ ಇದನ್ನೆಲ್ಲ ಕಾಶೀರಾಮನೇ ಹೇಳಿರಬಹುದು. ಅವನು ಯಾರೊಂದಿಗೂ ಸರಿಯಾಗಿಲ್ಲ. ಸೊಸೈಟಿಯಲ್ಲಿಯೂ ಆತ ಎಲ್ಲರೊಂದಿಗೆ ಜಗಳವಾಡುತ್ತಿರುತ್ತಾನೆ. ಏನು ಮಾಡುವುದು? ಆತನ ಸ್ವಭಾವವೇ ಆ ರೀತಿಯದ್ದಾಗಿದೆ" ಎಂದು ಮನೋಹರ ಅವರು ಮನಸೋಕ್ತ ನಕ್ಕರು.

"ಅವನ ನಿಜವಾದ ಹೆಸರೇನು?" ಅವನ 'ಸಾಥಿಯಾ' ಹೆಸರು ವಿಚಿತ್ರವೆನಿಸುತ್ತದೆ."

"ನೀವು ಸಾಥಿ ಸದಾನಂದ ಖೇರ ಅವರ ಹೆಸರನ್ನು ಕೇಳಿರಬಹುದು."

"ಹಾಂ. ಅವರು ಪ್ರಜಾ ಸೋಶಿಯಲಿಸ್ಟ್ ಪಾರ್ಟಿಯ ಬಹಳ ಪ್ರಭಾವಿ ಲೀಡರ್ ಆಗಿದ್ದರು. ಪರಿಣಾಮಕಾರಿ ಭಾಷಣಕಾರರಾಗಿದ್ದರು. ಅಲ್ಲದೆ ಅವರೊಬ್ಬ ಪ್ರಾಮಾಣಿಕ ಮುಂದಾಳೆಂದು ಹೆಸರಾಗಿದ್ದರು."

"ಹೌದು ಹೌದು ಅವರೇ! ಸಾಥಿಯಾ ಆಗ ಕೇವಲ ಎಂಟು ವರುಷಗಳ ಬಾಲಕ. ಮಲತಾಯಿಯ ವರ್ತನೆಯಿಂದ ಬೇಸತ್ತು ಆತ ಕೊಂಕಣದ ತನ್ನ ಊರಿನಿಂದ ಓಡಿ ಮುಂಬಯಿಗೆ ಬಂದಿದ್ದ. ದಾದರ ಸ್ಟೇಶನ್ನಿನ ಬೆಂಚಿನ ಮೇಲೆ ಕುಳಿತು ಅಳುತ್ತಿರುವ ಈ ಬಾಲಕನನ್ನು ಸಾಥಿ ಸದಾನಂದ ತಮ್ಮ ಮನೆಗೆ ಕರೆತಂದರು. ಅವರ ಸಂದೇಶಗಳನ್ನು ಅವರಿವರಿಗೆ ತಲುಪಿಸುವ ಕೆಲಸವನ್ನು ಆತ ಮಾಡುತ್ತಿದ್ದ. ಸಾಥಿ ಸದಾನಂದರ ಈ ಸಂದೇಶವಾಹಕನನ್ನು ಜನರು 'ಸಾಥಿ' ಎಂದಿಷ್ಟೇ ಕರೆಯುತ್ತಿದ್ದರು. ಕ್ರಮೇಣ ಜನರು 'ಸಾಥಿ'ಯನ್ನು ಸಾಥಿಯಾ ಮಾಡಿದರು. ಅವನ ನಿಜವಾದ ಹೆಸರು ಯಾರಿಗೂ ಗೊತ್ತಿಲ್ಲ. ಬಹುಶಃ ಅದು ಆತನಿಗೂ ಗೊತ್ತಿರಲಿಕ್ಕಿಲ್ಲ."

ಮನೋಹರ ಅವರು ಮತ್ತೊಮ್ಮೆ ಹೊರಗೆ ಬಾಗಿ ನೋಡಿದರು.

"ಸದಾನಂದರು ಬಹಳ ಒಳ್ಳೆಯ ವ್ಯಕ್ತಿಯಾಗಿದ್ದರು. ಅವರು ಇವನನ್ನು ಸ್ಕೂಲಿಗೆ ಸೇರಿಸಿದ್ದರು. ಅವನು ಮ್ಯಾಟ್ರಿಕ್ ವರೆಗೆ ಓದಿದ್ದಾನೆ. ಆದರೆ ಅಂತಿಮ ಪರೀಕ್ಷೆಯಲ್ಲಿ ಪಾಸಾಗಲಿಲ್ಲ."